ಮೂಲ ದಾವಾ ನಂ. 81/2022

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 06.06.2024 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಸ್.ಜಿ.ಎನ್. ವಕೀಲರಿಂದಃ**

ದಾವಾಸ್ತಿಯಲ್ಲಿ ಎಷ್ಟು ಹಿಸ್ಸೆಗಳು ಆಗಿವೆ ಎಂದು ನನಗೆ ನೆನಪಿಲ್ಲ. ವಾದಿ ಸುಗಂದಾ, ಸತೀಶ ಮತ್ತು ಪ್ರತಿವಾದಿಯ ಹೆಂಡತಿಯ ಹೆಸರಿಗೆ ಮತ್ತು ಪ್ರತಿವಾದಿಗೆ ದಾವಾಸ್ತಿಯನ್ನು ಮಾರಾಟ ಮಾಡಿದ್ದೇನೆ. ಸುಗಂದಾ ಮತ್ತು ಸತೀಶರವರು ತಾವು ಖರೀದಿ ಮಾಡಿದ ಜಾಗಕ್ಕೆ ಹೋಗಲು ಯಾವ ರಸ್ತೆ ಉಪಯೋಗಿಸುತ್ತಾರೆ ಎಂದರೆ ಸಾಕ್ಷಿ ನಮ್ಮ ಮಾಲ್ಕಿ ಜಾಗದಲ್ಲಿ ಮಾಡಿಕೊಟ್ಟ ರಸ್ತೆಯ ಮೂಲಕ ಹೋಗುತ್ತಾರೆ ಎಂದು ನುಡಿಯುತ್ತಾರೆ. ಸದ್ರಿ ಜಾಗ ಖರೀದಿ ಮಾಡಿದ ಎಲ್ಲರೂ ಕೂಡ ಸದ್ರಿ ರಸ್ತೆಯಲ್ಲಿಯೇ ಹಾದು ಹೋಗುತ್ತಾರೆ. ದಾವಾಸ್ತಿಯ ಪೂರ್ವ ದಿಕ್ಕಿಗೆ ನವಿಲಗೋಣ ರಸ್ತೆ ಹಾದು ಹೋಗಿದೆ. ಪ್ರತಿವಾದಿ ಯಾವ ದಿಕ್ಕಿನಲ್ಲಿ ರಸ್ತೆ ಮಾಡಲು ಪ್ರಯತ್ನಪಟ್ಟಿದ್ದಾರೆ ಎಂದು ನಾನು ಕಚ್ಚಾ ನಕಾಶೆಯನ್ನು ಹಾಜರುಪಡಿಸಿದ್ದೇನೆ. ಪ್ರತಿವಾದಿ ನವಿಲಗೋಣ ರಸ್ತೆಯಿಂದ ಓಡಾಡುತ್ತಿದ್ದು ನಾನು ಹೇಳಿದ ರಸ್ತೆಯಲ್ಲಿ ಓಡಾಡುತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಗೆ ಪ್ರತ್ಯೇಕ ರಸ್ತೆ ಇರುವ ಬಗ್ಗೆ ಹದ್ದುಬಸ್ತನಲ್ಲಿ ತೋರಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯ ಈ ಖಾತೆ ಮಾಡಿಸಿದರೆ ನನಗೆ ನಷ್ಟ ಆಗುತ್ತದೆ. ಅದು ಹೇಗೆ ತೊಂದರೆ ಆಗುತ್ತದೆ ಎಂದರೆ ಸಾಕ್ಷಿ ಪ್ರತಿವಾದಿಯರು ಈ ಖಾತೆ ಮಾಡಿಸಿದರೆ ತಮ್ಮ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡುತ್ತಾರೆ. ಅದರ ಬದಲಿಗೆ ಆದನ್ನು ನಮಗೆ ಮಾರಾಟ ಮಾಡಿ ಎಂದು ಕೇಳಿದ್ದೇನೆ. ಸದ್ರಿ ಆಸ್ತಿಯನ್ನು ನಮಗೆ ಮಾರಾಟ ಮಾಡಬೇಕೆಂದು ಈ ದಾವೆಯನ್ನು ಹೂಡಿದ್ದೇನೆ. ನನ್ನ ಮನೆಯವರು ಪಂಚಾಯತ ಸದಸ್ಯರು ಎಂದರೆ ಸರಿ. ಅವರ ಪ್ರಭಾವಗೊಳಿಸಿ ಪ್ರತಿವಾದಿಯರು ಈ ಖಾತೆ ಮಾಡಿಸಿಕೊಳ್ಳದಂತೆ ತಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಈ ಖಾತೆ ಮಾಡಿಸುವಾಗ ನನ್ನ ತಂದೆ ತಕರಾರು ಹಾಕಿದ್ದರು ಎಂದರೆ ಸರಿ. ಸಾಕ್ಷಿಗೆ ನಿಪಿ 6 ರಲ್ಲಿ ಇರುವ ಸಹಿ ತೋರಿಸಲಾಗಿ ಅದು ತನ್ನ ತಂದೆಯ ಸಹಿ ಎಂದು ನೋಡಿ ಗುರುತಿಸಿದ್ದರಿಂದ ಸದ್ರಿ ಸಹಿಯನ್ನು ನಿ.ಡಿ. 3 ಎಂದು ಗುರುತಿಸಲಾಯಿತು. ನಿ.ಪಿ. 3 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದು ನನ್ನ ತಂದೆಯ ಸಹಿ ಎಂದು ನುಡಿಯುತ್ತಾರೆ. ಸದ್ರಿ ಸಹಿಯನ್ನು ನಿ.ಡಿ. 4 ಎಂದು ಗುರುತಿಸಲಾಯಿತು. ನಿ.ಪಿ. 3 ಮತ್ತು 6 ರಲ್ಲಿ ಇರುವ ಸಹಿಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

ದಾವಾ ದಾಖಲಿಸುವ ಸಮಯದಲ್ಲಿ ದಾವಾಸ್ತಿ ವಾದಿಯ ಹೆಸರಿನಲ್ಲಿ ಇತ್ತು. ಈಗಲೂ ಕೂಡ ದಾವಾಸ್ತಿ ವಾದಿಯ ಹೆಸರಿನಲ್ಲಿ ಇದೆ. ಸಾಕ್ಷಿಗೆ ಒಂದು ಆರ್.ಟಿ.ಸಿ.ಯನ್ನು ತೋರಿಸಲಾಗಿ ಅದರಲ್ಲಿ ದಾವಾಸ್ತಿ ತನ್ನ ಹೆಸರಿಗೆ ಇರುವುದಾಗಿ ಗುರುತಿಸಿದ್ದರಿಂದ ಅದನ್ನು ನಿ.ಡಿ.5 ಎಂದು ಗುರುತಿಸಲಾಯಿತು. ದಾವಾಸ್ತಿಯ ಮೇಲೆ ವಾದಿಗೆ ಯಾವುದೇ ಹಕ್ಕು ಇಲ್ಲದಿರುವ ಕಾರಣ ದಾವೆ ನಿಲ್ಲುವುದಿಲ್ಲ ಎಂದರೆ ಸರಿಯಲ್ಲ. ವಾದಿ ಸುಳ್ಳು ದಾವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಹೊರತುಪಡಿಸಿ ಸ.ನಂಃ399 ರಲ್ಲಿ ನನಗೆ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. ಪ್ರತಿವಾದಿ ದಾವಾಸ್ತಿಯಲ್ಲಿ ಯಾವುದೇ ರೀತಿಯ ದಾಳಿ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಬೆನ್ ಶೇತ್ಗಿಯಲ್ಲಿ ತೋರಿಸಿರುವ ದಾರಿಯಲ್ಲಿಯೇ ಆತ ಓಡಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಆಸ್ತಿಯ ಈ ಸ್ವತ್ತನ್ನು ಮಾಡಿಸದಂತೆ ತಡೆಯಲು ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.